ಕವಿಗಳು ಯಾವಾಗಲೂ ಎದುರಿಸುತ್ತಲೇ ಬಂದಿದ್ದಾರೆ. ಅದರ ಸಾಂಪ್ರದಾಯಿಕ ನೆಲೆಗಳನ್ನು ಪಕ್ಕಕ್ಕಿರಿಸಿ, ಅದರಲ್ಲಿ ತಮಗೆ ಬೇಕಾದ ಸಂಗತಿಗಳನ್ನು ಆರಿಸಿಕೊಳ್ಳುವಲ್ಲಿ ಯಾವಾಗಲೂ ಇವರಿಗೆ ಆಸಕ್ತಿ. ಈ ಮಾದರಿಗಳ ಮರು ಇತಿಹಾಸದ ಹಿನ್ನೆಲೆಯ ನಿರೂಪಣೆ ಇತ್ತೀಚಿನದ್ದು. ಆರಂಭದಲ್ಲಿ ಈ ಮಾದರಿಗಳನ್ನು ನಿರಾಕರಿಸುವುದೇ 'ಗುರುತಿನ ಹೋರಾಟ'ದ ಮೊದಲ ಹೆಜ್ಜೆ ಎಂದು ಇವರೆಲ್ಲ ತಿಳಿದಂತೆ ಕಾಣುತ್ತದೆ. ಕಮಲಾ ಹಂಪನಾ, ಮುಕ್ತಾಯಕ್ಕ, ಎಚ್.ಎಲ್. ಪುಷ್ಪಾ, ಇವರ ಕವಿತೆಗಳ ನಡುವಿನ ವ್ಯತ್ಯಾಸ ಇದನ್ನು ಸ್ಪಷ್ಟವಾಗಿ ಹೇಳುತ್ತಾರೆ.

ನಿಮ್ಮ ಕಾಮಾಗ್ನಿ ಕುಂಡಕೆ
ನಮ್ಮ ಶೀಲವನು ಬಲಿಗೊಟ್ಟು
ನಿಮ್ಮ ಮಾನಾಪಮಾನವನು
ಕಾಪಾಡಲು ನಿಮ್ಮಿಂದಲೇ
ಪತಿವ್ರತೆಯರ ಪಟ್ಟಕ್ಕೇರಿ
.................
ನರಳುತ್ತಿರುವವರು
ನಾವು,
ನಾವು ಪತಿವ್ರತೆಯರಲ್ಲ
—ಎಚ್.ಎಸ್. ಮುಕ್ತಾಯಕ್ಕ

ಹೇಮಾ ಪಟ್ಟಣಶೆಟ್ಟಿಯರ 'ನಿಮ್ಮ ಪುರುಷ ಸೂಕ್ತದಲಿ' ಕೂಡ ಹೆಣ್ಣಿನ ಸ್ವಪ್ರಜ್ಞೆಯ ನೆಲೆಯಿಂದಲೇ ಹುಟ್ಟಿರುವಂಥದ್ದು.

ಲಲಿತಾ ಸಿದ್ಧಬಸವಯ್ಯನವರ 'ದೇವಿ ಮಹಾತ್ಮೆ' ಕನ್ನಡದ ಅತ್ಯುತ್ತಮ ಕವಿತೆಗಳಲ್ಲೊಂದು.

ಅಷ್ಟಲ್ಲದೆ ಹಾರಿಕೊಂಡಳೆ ಆ ಹುಡುಗಿ
ಅಗ್ನಿಗೊಂಡಕ್ಕೆ
ಅಪ್ಪ ಕರೆಯಲಿಲ್ಲ, ಅಮ್ಮ ಇಳುಹಲಿಲ್ಲವೆಂಬುದಲ್ಲ
ಸುಮ್ಮನೆ
ಕೇರಿಯ ಬಾಯ್ದುರಿಕೆಗೆ, ದೇವರಹಸ್ಯ
ಸೋಸಿದವರಿಲ್ಲ
ಮೇಲೆನಿಸಿತ್ತೇನೋ, ಮರ್ಯಾದಸ್ಥೆಗೆ ಗಂಡನೆಯ
ಒಳಜ್ವರಕ್ಕಿಂತ
ಒಂದೇಟಿಗೆ ಬೂದಿಗುಟ್ಟಿಸುವ ಕೆಂಡ

ಹೆಣ್ಣಿನ ಅಂತರಂಗದ ರಣರಂಗವನ್ನು ಆತ್ಮಹತ್ಯೆಯೋ ಕೊಲೆಯೋ ಬಗೆಹರಿಯಲಾಗದಂಥ ಸಾವಿರಾರು ಹೆಣ್ಣಿನ ತಂತ್ರಗಳನ್ನು ಹೇಳ ಹೇಳುತ್ತಾ 'ದೇವಿ ಮಹಾತ್ಮೆ' ಎನ್ನುವುದು ಗಂಡಾಳಿಕೆಯ ಅಸ್ತ್ರವೂ, ಹೆಣ್ಣಿನ ನಿಜ ಶಕ್ತಿಯ ಶಾಸ್ತ್ರವೂ, ಆಗಿಬಿಟ್ಟಿರುವ ವಿಲಕ್ಷಣ ವಾಸ್ತವವನ್ನು ಅಪೂರ್ವವಾಗಿ ಕಟ್ಟಿಕೊಡುತ್ತದೆ.

ಇವಳೆ ಮಾರಮ್ಮ
ಇವಳೆ ಮಾರಮ್ಮ
ಎಲ್ಲೆಲ್ಲಿ ಗಂಡು ತಾರಾತಿಗಡಿ
ಅಲ್ಲೆಲ್ಲ ಹೆಣ್ಣು ಊರ ಮಾರಮ್ಮ

ಹೆಣ್ಣನ್ನು ಕಟ್ಟುತ್ತಲೇ ಈ ಕವಿತೆ ಗಂಡನ್ನು ಅವನ ಅಕಾರಣ ಸಿಂಹಾಸನದಿಂದ ಕೆಳಗಿಳಿಸಿ ಎಸೆಯುತ್ತದೆ. ಗಂಡು ಮತ್ತು ಹೆಣ್ಣು ಇಬ್ಬರೂ ಮೀರಿಕೊಳ್ಳಬೇಕಾದ್ದು ಏನನ್ನು ಎನ್ನುವುದನ್ನು ಈ ಕವಿತೆ ಸ್ಫಟಿಕದ ಶಲಾಕೆಯಂತೆ ಹೇಳುತ್ತಾರೆ.

ಸವಿತಾ ನಾಗಭೂಷಣರ 'ತಾಯಿ' ಕವಿತೆ ಹೆಣ್ಣಿನ ಶಕ್ತಿ ಮೂಲದತ್ತ ಗಮನ ಸೆಳೆಯುತ್ತದೆ.

ಕಲ್ಲಿನಂತೆ ಪೆಡಸು
ಹುಲ್ಲಿನಂತೆ ಬೆಳಸು
ಕಪ್ಪುಗುರುಳು
ಗಂಡುಗೊರಳು
...........
ತಾಯಿ ದುರ್ಗೆಯ ನಿಜವನರಿಯುವ
ಧೀರರಾರೇ
ಜಗದೊಳು!

ತಾಯ್ತನವನ್ನು ಭಕ್ತಿ, ಪೂಜೆಯ ಮಜಲಿನಿಂದ 'ಶಕ್ತಿ'ಯ ನೆಲೆಯಲ್ಲಿ ಈ ಕವಿತೆ ಕೂರಿಸುತ್ತದೆ. ಪುಣ್ಯಕೋಟಿಯ ಹೃದಯದಲ್ಲಿ ಚಂಡವ್ಯಾಘ್ರನ ಅಭಯವನ್ನು ಹೊತ್ತಿರುವ ತಾಯಿಯ ಶಕ್ತಿಯ ಮೂಲ ತನ್ನ ಜವಾಬ್ದಾರಿಯಿಂದ ಬಂದದ್ದೋ, ತಾಯ್ತನಕ್ಕೇ ಆ